C.R.P.67

| Form No.4 (Criminal) Deposition Sheets (R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 256/2019

**ಚಾ.ಸಾ.–10 ಪ್ರಾ.ಸಾ.–11**

| | |
|---|---|
| **ಸಾಕ್ಷಿದಾರರ ಹೆಸರು** | **ಮಹೇಶ** |
| **ತಂದೆಯ ಹೆಸರು** | **ಲೇಟ್ ಬೆಟ್ಟೇಗೌಡ** |
| **ವಯಸ್ಸು** | **47 ವರ್ಷಗಳು** |
| **ಉದ್ಯೋಗ** | **ಗಾರೆ ಕೆಲಸ** |
| **ವಾಸ** | **ಚಿಕ್ಕೇಗೌಡನದೊಡ್ಡಿ, ಮಂಡ್ಯ** |

**ದಿನಾಂಕಃ 09.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ–1, 2, 3, 4, 5, 6, 7 ರವರ ಪರಿಚಯ ನನಗೆ ಇದೆ. ಅವರು ಯಾವ ಜಾತಿಯವರು ಎಂದು ನನಗೆ ಗೊತ್ತಿಲ್ಲ. ಚಾಸಾ- 2 ರವರು ನನ್ನ ಜೊತೆ ಗಾರೆ ಕೆಲಸ ಮಾಡುತ್ತಿದ್ದರು.

2) ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರಲ್ಲಿ 1 ಮತ್ತು 2ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos. 1 and 2 in the dock). ಉಳಿದ ಆರೋಪಿತರ ಪರಿಚಯ ನನಗೆ ಇಲ್ಲ ಅವರನ್ನು ನೋಡಿರುವುದಿಲ್ಲ. ಚಾಸಾ- 2 ರವರ ಮನೆ ಗಾಂಧಿನಗರ 6ನೇ ಕ್ರಾಸಿನಲ್ಲಿ ಇದ್ದು ಅವರ ಹಳೆಯ ಮನೆ ಬಿದ್ದು ಹೋಗಿದ್ದು ಸದರಿ ಮನೆಯನ್ನು ಕಟ್ಟಲು ಚಾಸಾ- 2 ರವರನ್ನು ನನ್ನನ್ನು ಅಲ್ಲಿಗೆ ದಿಃ30.08.2019 ರಂದು ಕರೆಸಿದ್ದರು. ಚಾಸಾ- 2 ಮತ್ತು 11 ರವರು ನನ್ನ ಜೊತೆ ಕೆಲಸ ಮಾಡುತ್ತಿದ್ದು ನಾವು ಮೂವರು ಆ ಸಮಯ ಅಲ್ಲಿ ಕೆಲಸ ಮಾಡುತ್ತಿದ್ದೆವು. ಸದರಿ ಚಾಸಾ- 1 ರವರ ಸ್ಥಳದಲ್ಲಿ ನಾವು ಸೀಮೆಂಟ್ ಬ್ರಿಕ್ಕಿನಿಂದ

ಶೆಡ್ಡನ್ನು ಕಟ್ಟುತ್ತಿದ್ದೆವು. ಆ ಸಮಯ ಠಾಣೆಯಿಂದ ಪೋನ್ ಬಂದಿದ್ದು, ಚಾಸಾ- 1 ರಿಂದ 4 ರವರು ಠಾಣೆಗೆ ಹೋದರು. ಆಗ ಸಮಯ ಬೆಳಿಗ್ಗೆ 9.30 – 10.00 ಗಂಟೆ ಆಗಿತ್ತು. ನಾವು ಕೆಲಸ ಮಾಡುವುದನ್ನು ಮುಂದುವರೆಸಿದೆವು. ಆ ಸಮಯ ಸುಮಾರು 10.30 – 11.00 ಗಂಟೆ ಸಮಯದಲ್ಲಿ 10 – 15 ಜನರು ಅಲ್ಲಿಗೆ ಬಂದು ನಾವು ಕಟ್ಟಿದ್ದ ಶೆಡ್ಡನ್ನು ಹುರುಳಿದರು. ಸದರಿ 10 – 15 ಜನರಲ್ಲಿ ಈ ದಿನ ನ್ಯಾಯಾಲಯದ ಮುಂದಿರುವ 1 ಮತ್ತು 2ನೇ ಆರೋಪಿತರು ಇದ್ದರು. ನಾನು ಚಾಸಾ- 2 ರವರಿಗೆ ಪೋನ್ ಮಾಡಿ ವಿಷಯ ತಿಳಿಸಿದಾಗ ಅವರು ಸ್ಥಳಕ್ಕೆ ಬಂದರು. ಚಾಸಾ- 2 ರವರು ಅಲ್ಲಿಗೆ ಬಂದ ನಂತರ ನಾವು ಅಲ್ಲಿಂದ ಹೊರಟೆವು. ನಾವು ಅಲ್ಲಿಂದ ಹೊರಡುವ ಪೂರ್ವದಲ್ಲಿ ಅಲ್ಲಿಗೆ ಬಂದು ಶೆಡ್ಡು ಹುರುಳಿಸಿದ 15 ಜನರಲ್ಲಿ ಕೆಲವರು ಚಾಸಾ- 2, ಅವರ ತಂದೆ, ಅವರ ಅತ್ತೆಯನ್ನು ತಳ್ಳಿದರು. ಯಾವ ಕಾರಣಕ್ಕಾಗಿ ಅವರು ಗಲಾಟೆ ಮಾಡಿರುತ್ತಾರೆ ಎಂದು ನಾನು ಚಾಸಾ- 2 ರವರನ್ನು ಕೇಳಿರುವುದಿಲ್ಲ. 1 ಮತ್ತು 2ನೇ ಆರೋಪಿತರು ಮತ್ತು ಅವರ ಜೊತೆ ಬಂದವರು ಗೊಡೆಯನ್ನು ಹುರುಳಿಸಿದ ಪೋಟೋವನ್ನು ನನ್ನ ಮೊಬೈಲ್ ಫೋನಿನಲ್ಲಿ ತೆಗೆದು ಸದರಿ ಪೋಟೋವನ್ನ ಚಾಸಾ- 2 ರವರಿಗೆ ಕಳುಹಿಸಿರುತ್ತೇನೆ. ಈ ಎಲ್ಲಾ ವಿಚಾರವನ್ನು ಪೋಲೀಸರಿಗೆ ಹೇಳಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದಃ**

3) ನಾನು 2015 ರಿಂದ ಗಾರೆ ಕೆಲಸ ಮಾಡುತ್ತಿದ್ದೇನೆ. ನಾನು ಸುಮಾರು 60 ಮನೆಗಳನ್ನು ಕಟ್ಟಿರುತ್ತೇನೆ. ಸಾಮಾನ್ಯವಾಗಿ ಮನೆಗಳನ್ನು ನಿರ್ಮಾಣ ಮಾಡಬೇಕಾದರೆ ಪರವಾನಿಗೆಯನ್ನು ನಗರಸಭೆಯಿಂದ ಅಥವಾ ಗ್ರಾಮ ಪಂಚಾಯಿತಿಯಿಂದ ಪಡೆಯಬೇಕು ಎಂದು ನನಗೆ ಗೊತ್ತಿದೆ. ಸಾಮಾನ್ಯವಾಗಿ ಕಟ್ಟಡ ನಿರ್ಮಾಣ ಮಾಡುವ ಪೂರ್ವದಲ್ಲಿ ಚದುರಕ್ಕೆ ಇಷ್ಟು ಹಣ ಎಂದು ಮಾತುಕತೆ ಮಾಡಿ ಒಡಂಬಡಿಕೆ ಮಾಡಿಕೊಳ್ಳುತ್ತೇವೆ. ಈ ಪ್ರಕರಣದಲ್ಲಿ ಇರುವ ಶೆಡ್ಡನ್ನು ನಿರ್ಮಾಣ ಮಾಡುವ ಸಲುವಾಗಿ ಯಾವುದೇ ಒಡಂಬಡಿಕೆಯನ್ನು ಮಾಡಿರುವುದಿಲ್ಲ. ಸದರಿ ಕಟ್ಟಡ ನಿರ್ಮಾಣ ಮಾಡಲು ಪರವಾನಿಗೆ ಪಡೆದುಕೊಂಡಿರುತ್ತಾರೋ ಎಂದು ನನಗೆ ಗೊತ್ತಿಲ್ಲ. ಸದರಿ ಕಟ್ಟಡದ ಸಂಬಂದಪಟ್ಟಂತೆ ಅದರ ಮಾಲೀಕರು ಯಾರು ಮತ್ತು ಪರವಾನಿಗೆಯನ್ನು ಪಡೆದಿರುತ್ತಾರೋ ಎಂದು ಯಾವುದೇ ದಾಖಲೆಗಳನ್ನು ನನ್ನ ಗಮನಕ್ಕೆ ಬಂದಿರುವುದಿಲ್ಲ.

4) ಚಾಸಾ-2 ನನ್ನ ಬಳಿ ಸುಮಾರು ವರ್ಷಗಳಿಂದ ಗಾರೆ ಕೆಲಸ ಮಾಡಿಕೊಂಡಿರುತ್ತಾರೆ. ನಾನು ಎಲ್ಲಿ ಕರೆದರೂ ಅವರು ಬಂದು ಕೆಲಸ ಮಾಡುತ್ತಾರೆ, ಮುಂಗಡವಾಗಿ ಹಣವನ್ನು ಸಹಾ ನನ್ನಿಂದ ಪಡೆದುಕೊಂಡಿರುತ್ತಾರೆ. ದಿಃ30.08.2019 ರಂದು ನಾನು ಯಾವುದೇ ಕಟ್ಟಡವನ್ನು ಗಲಾಟೆ ನಡೆದಿದೆ ಎನ್ನುವ ಸ್ಥಳದಲ್ಲಿ ಕಟ್ಟುತ್ತಿರಲಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆದಿದೆ ಎನ್ನುವ ಸಮಯ ಸದರಿ ಸ್ಥಳದ ಮಾಲೀಕರು ಯಾರು ಎಂದು ನನಗೆ ಗೊತ್ತಿರಲಿಲ್ಲ, ಆದರೆ ನಂತರ ಅದರ ಮಾಲೀಕರು 1ನೇ ಆರೋಪಿ ಶಶಿಧರ ಎಂದು ನನಗೆ ಗೊತ್ತಾಗಿರುತ್ತದೆ. 1ನೇ ಆರೋಪಿ ಸದರಿ ಸ್ಥಳ ಅವರದು ಅದರಲ್ಲಿ ಚಾಸಾ-1 ರವರು ತಾತ್ಕಾಲಿಕ ಶೆಡ್ಡು ಕಟ್ಟಿರುತ್ತಾರೆ ಅದನ್ನು ತೆರವುಗೊಳಿಸಬೇಕೆಂದು ಪೋಲೀಸ್ ಠಾಣೆಯಲ್ಲಿ ಮತ್ತು ನ್ಯಾಯಾಲಯದಲ್ಲಿ ದೂರು ಸಲ್ಲಿಸಿರುವುದು ನನ್ನ ಗಮನಕ್ಕೆ ಆ ಸಮಯ ಬಂದಿರುತ್ತದೆ ಎಂದರೆ ಆ ದಿನ 9.30 – 10.00 ಗಂಟೆಯ ಸಮಯದಲ್ಲಿ ಠಾಣೆಯಿಂದ ಕರೆ ಬಂದಾಗ ನನಗೆ ಗೊತ್ತಾಗಿರುತ್ತದೆ. ಈ ವಿಚಾರ ಗೊತ್ತಾದ ನಂತರ ನಾನು ಸಹಾ ಪೋಲೀಸ್ ಠಾಣೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿ ವಿಚಾರದಲ್ಲಿ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಆ ಸಮಯ ಎಲ್ಲಾ ದಾಖಲಾತಿಗಳು 1ನೇ ಆರೋಪಿಯ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ ದಿನ ಈ ಘಟನೆಗೆ ಸಂಬಂದಪಟ್ಟಂತೆ ವಿಚಾರಣೆ ನಡೆಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

5) ಯಾವುದೇ ಘಟನೆ ಸ್ಥಳದಲ್ಲಿ ಆ ದಿನ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಆರೋಪಿತರು ಘಟನೆ ನಡೆದಿದೆ ಎನ್ನುವ ಸ್ಥಳಕ್ಕೆ ಬಂದು ಗೋಡೆಯನ್ನು ಹುರುಳಿಸುವುದಾಗಲೀ ಯಾರಿಗಾದರೂ ಹಲ್ಲೆ ಮಾಡುವುದಾಗಲೀ ಜಾತಿ ನಿಂದನೆ ಮಡುವುದಾಗಲೀ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನನ್ನ ಮೋಬೈಲ್ ಫೋನನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೋಬೈಲ್ ಫೋನಿನಲ್ಲಿ ನಾನು ಯಾವುದೇ ವಿಡೀಯೋ ಅಥವಾ ಪೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ- 2 ರವರು ನನ್ನ ಕೆಲಸ ಮಾಡುತ್ತಿದ್ದರು ಎನ್ನುವ ಮುಲಾಜಿಗೆ ಅವರಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

6) ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ